


ಮದುವೆ, ತಾಯ್ತನ, ಆತ್ಮೀಯರ ಅನಾರೋಗ್ಯ ಅಥವಾ ಇನ್ನಿತರ ಒತ್ತಡಗಳಿಂದಾಗಿ ಉದ್ಯೋಗ ಬಿಡಬೇಕಾದ ಸಂದರ್ಭ ಮಹಿಳೆಯರಿಗೆ ಒದಗಿ ಬರುತ್ತದೆ. ಈ ರೀತಿ ಉದ್ಯೋಗ ಬಿಡುವ ಮಹಿಳೆಯರು ಬೇಜಾರು ಕಳೆಯಲು ಕ್ಲಬ್, ಪಾರ್ಟಿ, ಶಾಪಿಂಗ್ ಎಂದು ಸುತ್ತಾಡಿ ಸಮಯ ಕಳೆಯುವವರಿದ್ದಾರೆ. ಇನ್ನೂ ಕೆಲವರು ಮನೆಯಲ್ಲಿಯೇ ಉಳಿಯುವಂತಾದರೂ ಸಾಧನೆಯ ಹಾದಿಯತ್ತ ಮುಖ ಮಾಡಿದವರಿದ್ದಾರೆ.

■ ಸವಿತಾ ಶಾಂತಪ್ರಿಯ

ದಿಟ್ಟೆಯರಿದ್ದಾರೆ. ಅರ್ಧಕ್ಕೆ ನಿಂತ ಕಾನೂನು ಅಭ್ಯಾಸ ಪೂರ್ಣಗೊಳಿಸಿ ನ್ಯಾಯವಾದಿಯಾದವರೂ ಇದ್ದಾರೆ. ಉಚಿತ ನ್ಯಾಯ ಸಲಹೆಗಳನ್ನು ನೀಡುತ್ತ ಸೇವೆ ಸಲ್ಲಿಸುವವರೂ ಇದ್ದಾರೆ. ಪಿಯುಸಿ ಬಳಿಕ ಮದುವೆ ಮಕ್ಕಳು ಎಂದು ಅರ್ಧಕ್ಕೆ ನಿಂತ ವಿದ್ಯಾಭ್ಯಾಸವನ್ನು ಮುಂದುವರಿಸಿದವರೂ ಇದ್ದಾರೆ.

ಮನೆಯಿಂದಲೇ ಆನ್‌ಲೈನ್ ಬಿಸಿನೆಸ್‌ನಲ್ಲಿ ತೊಡಗಿಕೊಂಡು ಸೀರೆ, ಬಟ್ಟೆ, ಬ್ಯಾಗ್ ವ್ಯಾಪಾರ ಮಾಡಿಕೊಂಡು ಗಳಿಸುತ್ತಿರುವ ಸ್ತ್ರೀಯರಿದ್ದಾರೆ. ಅದೇ ರೀತಿ ಶೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುವುದು, ಇಂಟರ್ನೆಟ್ ಮೂಲಕ ವರ್ಕ್ ಫ್ರಮ್ ಹೋಮ್ ಎಂಬ ಹಣೆಪಟ್ಟಿಯಡಿಯಲ್ಲಿ ದುಡಿಯುವುದೂ ಇದೆ. ಇಂದು ಸಾಫ್ಟ್‌ವೇರ್ ಕಂಪನಿಗಳೂ ತಮ್ಮ ಬುದ್ಧಿವಂತ ಉದ್ಯೋಗಿಗಳನ್ನು ಬಿಡುವ ಮನಸ್ಸಿಲ್ಲದೆ ತಮ್ಮ ಮಹಿಳಾ ಉದ್ಯೋಗಿಗಳು ಬಯಸಿದಾಗ ಮನೆಯಿಂದಲೇ ದುಡಿಯುವ ಅವಕಾಶವನ್ನು ಕಲ್ಪಿಸಿ ಕೊಡುತ್ತಾರೆ. ಇದರ ಜೊತೆಗೆ ಜಾಬ್ ಟೈಪಿಂಗ್, ಡಿಟಿಪಿ, ಕಂಟೆಂಟ್ ಎಡಿಟಿಂಗ್, ಟ್ರಾನ್ಸ್‌ಸ್ಕ್ರಿಪ್ಷನ್, ಇಮೇಜ್ ಎಡಿಟಿಂಗ್, ಬ್ರೋಷರ್ ಡಿಸೈನ್ ಮುಂತಾದ ಕೆಲಸಗಳಲ್ಲಿ ತೊಡಗಿಕೊಂಡವರೂ ಇದ್ದಾರೆ. ಜೊತೆಗೆ ಕಾರ್ಪೊರೇಟ್ ಕಮ್ಯುನಿಕೇಶನ್, ಇವೆಂಟ್ ಮ್ಯಾನೇಜ್‌ಮೆಂಟ್ ನಡೆಸುವುದೂ ಇದೆ.

ಚಿತ್ರಕಲೆಯನ್ನು ಚೆನ್ನಾಗಿ ಭ್ಯಾಸ ಮಾಡಿಕೊಂಡು ಕಂಪೆನಿಗಳಲ್ಲಿ ಡಿಸೈನ್ ಆರ್ಟಿಸ್ಟ್ ಆಗಿ ಇದ್ದು ಕೊನೆಗೆ ಮನೆಯಲ್ಲೇ ಇರುವ ಪ್ರಸಂಗ ಬಂದಾಗ ಆನ್‌ಲೈನ್ ಮೂಲಕ ಅದೇ ಕೆಲಸವನ್ನು ಮುಂದುವರಿಸುವುದಲ್ಲದೆ ಟೈಲ್ಸ್ ಡಿಸೈನ್, ಬಟ್ಟೆಯ ಡಿಸೈನ್, ಜ್ಯುವೆಲ್ಲರಿ ಡಿಸೈನ್ ಮಾಡುತ್ತಾ ಸಾಕಷ್ಟು ದುಡಿಯುವ ಮಹಿಳೆಯರಿದ್ದಾರೆ. ಕಟ್ಟಡ ವಿನ್ಯಾಸ, ಒಳಾಂಗಣ ವಿನ್ಯಾಸ ಮುಂತಾದವನ್ನು ಮಾಡುವವರೂ ಇದ್ದಾರೆ. ತಮ್ಮೆಲ್ಲಾ ಜವಾಬ್ದಾರಿಗಳ ಮಧ್ಯೆ ಮನೆಯ ಒಂದು ಮೂಲೆಯಲ್ಲಿ ಸಣ್ಣ ಕ್ಲಿನಿಕ್ ಆರಂಭಿಸಿ ವೈದ್ಯಕೀಯ ಸೇವೆ ಸಲಹೆಯನ್ನು ಕೊಡುವ ವೈದ್ಯೆಯರೂ ಮನೆಯಲ್ಲೇ ಮದ್ದು ಎಣ್ಣೆ ಕಷಾಯ ತಯಾರಿ ಮಾಡಿಕೊಡುವ ಆಯುರ್ವೇದ ತಜ್ಞೆಯರೂ ಆನ್‌ಲೈನ್‌ನಲ್ಲಿ ಆರೋಗ್ಯ ಸಲಹೆ ಸಮಾಧಾನ ಮಾಡುತ್ತಾ ಗಳಿಸುವ ಡಯಟೀಶಿಯನ್ಸ್, ನ್ಯೂಟ್ರಿಶಿಯನ್ ತಜ್ಞೆಯರೂ ಸಾಕಷ್ಟು ಕಾಣಸಿಗುತ್ತಾರೆ. ಸ್ನಾತಕೋತ್ತರ ಪದವೀಧರೆಯಾಗಿ ಮನೆಪಾಠ ಮಾಡುವುದಲ್ಲದೆ ಮನಸ್ಸಿಗೆ ಖುಷಿಕೊಡುವ ಬೇರೆ ಬೇರೆ ವಿನ್ಯಾಸದ ಕೊರಳಹಾರ, ಬಳೆ, ಕಿವಿಯೋಲೆಗಳನ್ನು ತಯಾರಿಸಿ ಕೊಡುವ ಉದ್ಯೋಗ ಮಾಡುವವರೂ ಇದ್ದಾರೆ. ಈ ರೀತಿ ದಾರಿಗಳು ಬಹಳಷ್ಟಿವೆ. ಇಲ್ಲಿ ಹಣದ ಅವಶ್ಯಕತೆಯಿಂದ ದುಡಿಯುವವರಿದ್ದಾರೆ; ಮನಸ್ಸಂತೋಷಕ್ಕಾಗಿ ದುಡಿಯುವವರೂ ಇದ್ದಾರೆ; ತಮ್ಮ ವಿದ್ಯೆ ಇನ್ನೊಬ್ಬರ ಒಳಿತಿಗೆ ಸಹಕಾರಿಯಾಗಬೇಕು ಎಂಬ ಕಾಳಜಿಯಿಂದ ದುಡಿಯುವವರೂ ಇದ್ದಾರೆ.

ಈ ಎಲ್ಲಾ ಕೆಲಸಗಳಲ್ಲಿ ಹೆಚ್ಚಿನ ಓಡಾಟ ಬೇಡ. ಮನೆಯಿಂದಲೇ ಸಾಧ್ಯವಾದಷ್ಟು ಮಟ್ಟಿಗೆ ನಿಭಾಯಿಸಿಕೊಳ್ಳಬಹುದು. ಅಲ್ಲದೆ ಇರುವ ಅವಕಾಶದಲ್ಲಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹೆಚ್ಚು ಒತ್ತಡವಿಲ್ಲದೆ ಸ್ವತಂತ್ರವಾಗಿ ನಿಭಾಯಿಸಿಕೊಳ್ಳಬಹುದು. ಹೆಚ್ಚು ಬಂಡವಾಳವನ್ನೂ ಬಯಸದ ಉದ್ಯೋಗದ ದಾರಿಗಳಿವು. ಲಾಭವೂ ಅಷ್ಟೇನು ಇಲ್ಲದೇ ಹೋದರೂ ಪಾಕೆಟ್ ಮನಿಯಂತೂ ಖಂಡಿತ. ಜೊತೆಗೆ ಈ ರೀತಿಯ ಉದ್ಯೋಗ ಉದ್ಯಮ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ದೊರಕುವ ಸಂತೃಪ್ತಿ, ಆತ್ಮವಿಶ್ವಾಸ ಅಪರಿಮಿತ. ಉದ್ಯೋಗ ಬಿಟ್ಟ ಕಾರಣವನ್ನೇ ದಿನನಿತ್ಯ ಹಳಿದುಕೊಳ್ಳುತ್ತಾ ಅಳುತ್ತಾ ಕೂರುವ ಬದಲು ಈ ರೀತಿಯ ಚಟುವಟಿಕೆಯಿಂದ ಮನಸ್ಸು ಉಲ್ಲಾಸದಿಂದಿರುವುದಂತೂ ಸತ್ಯ.

ಆದರೆ ಇಲ್ಲೂ ಸಮಸ್ಯೆಗಳಿವೆ. ಮನೆಯಿಂದಲೇ ದುಡಿಯುವುದೆಂದರೆ ಒತ್ತಡ ರಹಿತವೇ ಆದರೂ ಕೆಲವು ಬಾರಿ ಒತ್ತಡಗಳುಂಟಾಗುವುದಿದೆ. ಮನೆಯಲ್ಲಿ ಯಾರಿಗಾದರು ಅಸೌಖ್ಯವಿದ್ದಲ್ಲಿ ಅಥವಾ ನೆಂಟರಿಷ್ಟರು ಮನೆಗೆ ಬಂದಲ್ಲಿ ಕೆಲಸ ಬಿಟ್ಟು ಹೋಗಿ ಅವರನ್ನು ಉಪಚರಿಸಬೇಕಾಗುತ್ತದೆ. ಆನ್‌ಲೈನ್‌ನಲ್ಲಿ ಗಂಭೀರ ಚರ್ಚೆಯಲ್ಲಿ ತೊಡಗಿದ್ದಾಗ ಯಾರೇ ಬಂದರೂ ಎದ್ದು ಹೋಗಲಾಗದ ಪರಿಸ್ಥಿತಿ ಇರುತ್ತದೆ. ಹೊತ್ತುಗೊತ್ತು ಇಲ್ಲದೆ ಬರುವ ಫೋನ್ ಕರೆಗಳೂ ಕೆಲವು ಬಾರಿ ಕೆಲಸಗಳಿಗೆ ತೊಡಕಾಗುವುದಿದೆ. ಸಂಪೂರ್ಣವಾಗಿ ಇದೇ ಕೆಲಸದಲ್ಲಿ ತೊಡಗಿಕೊಳ್ಳುವುದು ಅಸಾಧ್ಯವಾದಾಗ ಅಥವಾ ಕೆಲಸದ ಒತ್ತಡ ಹೆಚ್ಚಾದಾಗ ರಾತ್ರಿ ಹಗಲೆನ್ನದೆ ದುಡಿಯಬೇಕಾದ ಅನಿವಾರ್ಯತೆ ಹೆಚ್ಚುವುದೂ ಇದೆ. ಎರಡರ ಹೊಂದಾಣಿಕೆ ಕಷ್ಟವಾಗಿ ಕೈಚೆಲ್ಲುವ ಪರಿಸ್ಥಿತಿ ಉಂಟಾಗುವುದೂ ಇದೆ. ಆದರೂ ಇವೆಲ್ಲ ಕಿರಿಕಿರಿಗಳ ಬಳಿಕವೂ ತಮ್ಮ ಕೌಟುಂಬಿಕ ಕರ್ತವ್ಯಗಳನ್ನು ಪೂರೈಸಿ ತಾಯ್ತನವನ್ನು ಆನಂದಿಸಿ ಸ್ವಾವಲಂಬಿಯಾಗಿ ದುಡಿದು ಸಂಪಾದಿಸಿದ ತೃಪ್ತಿ ಇದೆಲ್ಲಕ್ಕಿಂತ ಮಿಗಿಲಾದುದು. ಆದರೆ, ಎಷ್ಟೋ ಬಾರಿ ಮನೆಯಲ್ಲಿದ್ದರೂ ಏನಾದರೂ ಮಾಡಬೇಕೆಂಬ ಆಸೆಯಿದ್ದರೂ ಸರಿಯಾದ ದಾರಿ ಕಾಣದೆ ಏನೂ ಮಾಡಲಾಗದೆ ತಮ್ಮೊಳಗೆ ಕೊರಗುವ ಮಹಿಳೆಯರೂ ಇದ್ದಾರೆ.

ಒಮ್ಮೆ ಕಂಪೆನಿಗಳಲ್ಲಿ ದುಡಿದು ಕೆಲಸ ಬಿಟ್ಟು ಮತ್ತೆ ಎಷ್ಟೋ ವರ್ಷಗಳ ಬಳಿಕ ಮತ್ತೆ ತೊಡಗಿಕೊಳ್ಳಬಯಸುವ ಮಹಿಳೆಯರಿಗೆ ಅನೇಕ ಸಮಸ್ಯೆಗಳು ಕಾಡುವುದುಂಟು. ಆತ್ಮವಿಶ್ವಾಸದ ಕೊರತೆ ಒಂದೆಡೆಯಾದರೆ ಆ ಕ್ಷೇತ್ರದ ಪರಿಣಿತಿಯ ಕೊರತೆಯೂ ಕಾಡುತ್ತದೆ. ಎಂದೋ ಬಿಟ್ಟ ವಿಷಯವನ್ನು ಮತ್ತೆ ಮನನ ಮಾಡಿಕೊಳ್ಳುವುದು ಕಷ್ಟ. ಇಂತಹವರಿಗಾಗಿಯೇ ನಗರಗಳಲ್ಲಿ ಮುಖ್ಯವಾಗಿ ಬೆಂಗಳೂರಿನಲ್ಲಿ ಅವತಾರ್ ಐವಿನ್, ಜಾಬ್ಸ್ ಫಾರ್ ಹರ್, ಶೀರೋಸ್ ಮುಂತಾದ ಕಂಪೆನಿಗಳು ರಿಫ್ರೆಶರ್ ತರಗತಿಗಳನ್ನು ನಡೆಸಿ ಅವರನ್ನು ಮತ್ತೆ ಕಂಪೆನಿಗಳಲ್ಲಿ ದುಡಿಯುವ ಮಟ್ಟಿಗೆ ತಯಾರು ಮಾಡಿ ಕೆಲಸ ಕೊಡಿಸುವ ಕಾರ್ಯದಲ್ಲಿ ತೊಡಗಿವೆ. ಹೆಚ್ಚಿನ ಕಂಪೆನಿಗಳು ಈ ರೀತಿ ದುಡಿಯ ಬಯಸುವ ಅಮ್ಮಂದಿರ ಬಗೆಗೆ ವಿಶೇಷ ಆಸ್ಥೆ ವಹಿಸುತ್ತಿವೆ. ಅವರಿಗಾಗಿ ಮನೆಯಿಂದಲೇ ಕೆಲಸ ಮಾಡುವ ಅವಕಾಶವನ್ನೂ ಕಲ್ಪಿಸುತ್ತಿವೆ. ಇಂತಹ ಮಹಿಳೆಯರ ಸಮಸ್ಯೆಯನ್ನು ಅರಿತುಕೊಂಡು ಅವರ ಅನುಕೂಲಕ್ಕೆ ತಕ್ಕಂತಹ ಪ್ರಾಜೆಕ್ಟ್ ಅಥವಾ ಅಸೈನ್‌ಮೆಂಟ್‌ಗಳನ್ನೇ ಕೊಡುತ್ತ ಕೆಲಸ ಪಡೆಯುವ ಕಂಪೆನಿಗಳು ಇಂದು ನಗರ ಪ್ರದೇಶಗಳಲ್ಲಿ ಹೆಚ್ಚಾಗುತ್ತಿವೆ.

ಅಂತೂ ಏನೋ ಒಂದು ಉದ್ದೇಶದಿಂದ ಕಾರಣದಿಂದ ಉದ್ಯೋಗ ಬಿಟ್ಟು ಮನೆಯಲ್ಲಿ ಉಳಿಯುವ ಪ್ರಸಂಗ ಬಂದಾಗಲೂ ಸುಮ್ಮನೇ ಕೊರಗುತ್ತಾ ತಮ್ಮೊಳಗೆ ಕೀಳರಿಮೆ ಬೆಳೆಸಿಕೊಂಡು ಕೂರುವ ಬದಲು ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಿ ಸಾಧಿಸುವ ಛಲದಿಂದ ಮುನ್ನುಗ್ಗಿ ಯಶಸ್ಸು ಕಂಡ ಇಂತಹ ಮಹಿಳೆಯರ ಕಾರ್ಯ ಶ್ಲಾಘನೀಯ. ■